11–00 AM

ಸಂತಾಪ ಸೂಚನೆ

ವಿಷಯ: ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಕೆ.ಆರ್. ತಿಮ್ಮರಾಯಪ್ಪರವರ ನಿಧನದ ಬಗ್ಗೆ.

ಅಧ್ಯಕ್ಷರು: ಇಲ್ಲಿ ಒಂದು ಸಂತಾಪ ಸೂಚನೆ ಪ್ರಕಟಣೆ ಇದೆ. ಮಾಜಿ ಶಾಸಕರಾದ ಶ್ರೀ ಕೆ.ಆರ್. ತಿಮ್ಮರಾಯಪ್ಪ ಅವರು ನಿಧನಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ. ವಿಧಾನ ಸಭೆಯ ಮಾಜಿ ಶಾಸಕರಾಗಿದ್ದ ಶ್ರೀ ಕೆ.ಆರ್.ತಿಮ್ಮರಾಯಪ್ಪನವರು ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕು ಕೊಟ್ಟೂರು ಗ್ರಾಮದಲ್ಲಿ ಜನಿಸಿದ್ದು, ಕೃಷಿಕರಾಗಿದ್ದರು. ಸಾಮಾಜಿಕ ಕಾರ್ಯಗಳಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದ ಶ್ರೀಯುತರು ಐದನೇ ವಿಧಾನ ಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು ದಿನಾಂಕ 29–07–2008 ರಂದು ನಿಧನ ಹೊಂದಿದರು.

ಈಗ ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಈ ಹಂತದಲ್ಲಿ ಸದನದಲ್ಲಿದ್ದ ಎಲ್ಲಾ ಮಾನ್ಯ ಸದಸ್ಯರು ಎದ್ದು ಒಂದು ನಿಮಿಷ ಮೌನವನ್ನು ಆಚರಿಸಿದರು.)

2.ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:–

ವಿಷಯ: ದಿನಾಂಕ 29–07–2008ರಂದು ವಿಧಾನಸಭೆಯಲ್ಲಿ ನಡೆದ ಅಹಿತಕರ ಘಟನೆ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾವು ಎಲ್ಲಾ ಸದಸ್ಯರು ತಮ್ಮ ಕೊಠಡಿಗೆ ಬಂದು ನಿನ್ನೆ ಇಲ್ಲಿ ನಡೆದಂಥ ಒಂದು ಅಹಿತಕರ ಘಟನೆ ಬಗ್ಗೆ ತಮಗೆ ವಿವರವಾಗಿ ತಿಳಿಸಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಕೂಡ ತಮ್ಮ ಜೊತೆಯಲ್ಲಿದ್ದರು. ನಿನ್ನೆ ನಡೆದಂಥ ಘಟನೆಯ ಬಗ್ಗೆ ನಮಗೆಲ್ಲರಿಗೂ ನೋವು ಅಷ್ಟೇ ಅಲ್ಲ, ಈ ಸದನದ ಘನತೆ ಮತ್ತು ಗೌರವಕ್ಕೆ ಧಕ್ಕೆ ಬರುವ ರೀತಿಯಲ್ಲಿ ನಡೆದಿದೆ ಎಂದರೆ ಅದು ಅತಿಶಯೋಕ್ತಿಯಲ್ಲ. ಅನೇಕ ಸಾರಿ ನಾವು ಮಾತನಾಡುವಾಗ ಡೆಮಾಕ್ರಸಿಯಲ್ಲಿ ಉತ್ತರ ಪ್ರತ್ಯುತ್ತರ ಕೊಡುತ್ತಿರುತ್ತೇವೆ, ಮತ್ತು ಅದೇ ರೀತಿಯಿಂದ ಮಾತನಾಡುತ್ತೇವೆ. ಕೆಲವು ಸಲ humorous ಆಗಿ ಮಾತನಾಡುತ್ತೇವೆ, ಕೆಲವು ಸಲ ಕಠಿಣವಾಗಿ ಮಾತನಾಡುತ್ತೇವೆ. ಏನೇ ಮಾತನಾಡಿದರೂ ನಮ್ಮ ನಮ್ಮ ಇತಿಮಿತಿಯಲ್ಲಿಟ್ಟುಕೊಂಡು ಮಾತನಾಡುತ್ತೇವೆ.